ನಾಂದಿಪದ



ಕಲೆ: ಬಸವರಾಜ ಎಸ್‌. ಕಲೆಗಾರ

# ಗದ್ಯ ಸೇರದು ಯಾರಿಗೆ?

**ಇದು** ರಮ್ಯ ಗದ್ಯ ಕಾಲ! ಹೊರಗೆ ಬೇಸಿಗೆಯ ಪಕಳೆಗಳು ತೆರೆದುಕೊಂಡಂತೆಲ್ಲ ಪ್ರಖರಗೊಳ್ಳುತ್ತಿದೆ ಧಗೆ. 'ಮಯೂರ'ದ ಈ ಸಂಚಿಕೆಯ ಗದ್ಯದ ಗರಿಗಳು ಹೊರಗಿನ ಧಗೆಯನ್ನು ಶಮನಗೊಳಿಸುವಂತಿವೆ, ಬಿಸಿಲನ್ನು ಬೆಳುದಿಂಗಳಾಗಿಸುವಂತಿವೆ. ಈ ಸಂಚಿಕೆಗೆಂದೇ ಬರೆಸಿದ ಪ್ರಬಂಧಗಳು ಈ ಹೊತ್ತಿನ ಪ್ರಬಂಧಗಳ ಬನಿಯನ್ನು ಸೂಚಿಸುವಂತಿವೆ. ಹಿರಿಯ ಕಿರಿಯ ಪ್ರಬಂಧಕಾರರು ಸೃಷ್ಟಿಸಿರುವ ಪ್ರಬಂಧಲೋಕ ಹಲವು ಅನುಭವಲೋಕಗಳನ್ನು ಕಾಣಿಸುತ್ತಿದೆ, ರುಚಿಕರ ಓದಿಗೆ ಒದಗುವಂತಿದೆ. ದಲಿತ್ ರ್‍ಯಾಪರ್ ಸುಮಿತ್ ಸಾಮೋಸ್‌ರ ಸಂದರ್ಶನ, 'ರಾಜಕೀಯ ವ್ಯಂಗ್ಯಚಿತ್ರ: ಹಾಗೆಂದರೇನು?' ನುಡಿ-ಚಿತ್ರ, ಪುಸ್ತಕ ವಿಮರ್ಶೆ – ಇವೆಲ್ಲವೂ ಗದ್ಯದ ಚೆಲುವಿನ ಹಲವು ಮುಖಗಳನ್ನು ಕಾಣಿಸುವ ವಿಶಿಷ್ಟ ರಚನೆಗಳಾಗಿವೆ.

ಕೆ.ವಿ. ತಿರುಮಲೇಶ್ ನಮ್ಮ ಕಾಲದ ಬಹು ದೊಡ್ಡ ಕವಿ. ಅವರನ್ನು ಸ್ಮರಿಸುವ ಮೂರು ಬರಹಗಳು ಈ ಸಂಚಿಕೆಯಲ್ಲಿವೆ. ಈ ಬರಹಗಳು, ಕವಿಯ ವ್ಯಕ್ತಿತ್ವ ಹಾಗೂ ಕಾವ್ಯದ ಸೊಗಸನ್ನು ಸಹೃದಯರ ಅನುಭವಕ್ಕೆ ತರುವಂತಿವೆ.

ಮಯೂರದ ಮಾರ್ಚ್ ತಿಂಗಳ ಸಂಚಿಕೆ ಮಹಿಳಾ ವಿಶೇಷವಾಗಿತ್ತು, 'ಕಾವ್ಯ ವಿಶೇಷ'ವೂ ಆಗಿತ್ತು. ಆ ಸಂಚಿಕೆಗೆ ಓದುಗರು ತೋರಿದ ಪ್ರತಿಕ್ರಿಯೆ ಚೇತೋಹಾರಿಯಾಗಿತ್ತು. ಈಗ ಗದ್ಯದ ಪಾಳಿ. ನೀವೇ ಹೇಳಿ – ಗದ್ಯ ಸೇರದು ಯಾರಿಗೆ?

**ಮಯೂರ ಬಳಗ**

editormy@mayura.co.in